ಕೊರಟಗೆರೆ ತಾಲ್ಲೂಕಿನ ರೈತರ ಪಂಪು ಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ

1169 (1523) ಶ್ರೀ ಚನ್ನಿಗಪ್ಪ ಸಿ.ಕೊರಟಗೆರೆ: ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ರೈತರು ಕೊಳವೆ ಬಾವಿಯನ್ನು ಕೊರೆಸಿದ್ದು, ಈ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕಕ್ಕೆ ಠೇವಣಿಯನ್ನು ಪಾವತಿ ಮಾಡಿ, ವಿದ್ಯುತ್ ಸಂಪರ್ಕಗಳು ಇಲ್ಲದೇ ಬೆಳೆಗಳಿಗೆ ನೀರು ಹಾಯಿಸದೇ ತೊಂದರೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಪಡೆಯಲು ಈಗಾಗಲೇ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಠೇವಣಿ ಪಾವತಿ ಮಾಡಿರುವವರ ಸಂಖ್ಯೆ ಎಷ್ಟು?

ಇ) ಅರ್ಜಿ ಸಲ್ಲಿಸಿರುವವರಿಗೆ ಹಾಗೂ ಠೇವಣಿ ಪಾವತಿ ಮಾಡಿರುವವರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರವು ಕೈಗೊಳ್ಳುವ ಕ್ರಮವೇನು?

ಶ್ರೀ ವೀರಕುಮಾರ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕನ್ನು 'ಗ್ರೇ' ತಾಲ್ಲೂಕೆಂದು ಘೋಷಿಸಲಾಗಿದೆ. ಆದುದರಿಂದ ಈ ತಾಲ್ಲೂಕಿನಲ್ಲಿ ಸ್ವಯಂ ಆರ್ಥಿಕ ನೆರವು ಯೋಜನೆಯಡಿಯಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲಾಗುವುದು.

ಆ) 28-2-2001 ರ ಅಂತ್ಯದವರೆಗೆ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕೋರಿ ಸಲ್ಲಿಸಿರುವ ಅರ್ಜಿಗಳ ಒಟ್ಟು ಸಂಖ್ಯೆ 266. 173 ಅರ್ಜಿದಾರರಿಗೆ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿದೆ. ಉಳಿದ 91 ಅರ್ಜಿದಾರರುಗಳ ಪೈಕಿ 52 ಅರ್ಜಿದಾರರು ನಿಯಮಗಳನ್ನು ಪಾಲಿಸಿರುವುದಿಲ್ಲ. ಕೇವಲ 31 ಅರ್ಜಿದಾರರು ಮಾತ್ರ ಠೇವಣಿ ಪಾವತಿ ಮಾಡಿ ನಿಯಮಗಳನ್ನು ಪಾಲಿಸಿರುತ್ತಾರೆ. ಈ 31 ಅರ್ಜಿದಾರರುಗಳ ಕೊಳವೆ ಬಾವಿಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸುವ ಕಾರ್ಯವು ಪ್ರಗತಿಯಲ್ಲಿದ್ದು, ಆದಷ್ಟು ಶೀಘ್ರವಾಗಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲಾಗುವುದು.

ಬೆಂಗಳೂರು ಮಹಾನಗರ ಪಾಲಿಕೆಗೆ ಹೊಂದಿಕೊಂಡಿರುವ 7 (ಏಳು) ನಗರಸಭೆಗಳನ್ನು ಮಹಾನಗರ ಪಾಲಿಕೆಗೆ ಸೇರಿಸುವುದು

1171 (1231) ಶ್ರೀ ಆರ್. ಅಶೋಕ್, (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮಹಾನಗರ ಪಾಲಿಕೆಗೆ ಹೊಂದಿಕೊಂಡಿರುವ 7 ನಗರ ಸಭೆಗಳನ್ನು ಮಹಾನಗರ ಪಾಲಿಕೆಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ?

ಆ) ಯಾವಾಗ ನಗರ ಸಭೆಗಳನ್ನು ಮಹಾನಗರ ಪಾಲಿಕೆಗೆ ಸೇರಿಸಲಾಗುವುದು?

ಇ) ನಗರಸಭೆಗಳನ್ನು ಮಹಾನಗರ ಪಾಲಿಕೆಗೆ ಸೇರಿಸಿರುವುದರಿಂದ ಬೆಂಗಳೂರು ನಗರ ಪಾಲಿಕೆಗೆ ಆಗುವ ಉಪಯೋಗವೇನು?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು)

ಅ) ಇಲ್ಲ

ಇ) ಉದ್ಭವಿಸುವುದಿಲ್ಲ.

ಮಡಿಕೇರಿಯಲ್ಲಿರುವ ಕಾರಾಗೃಹ ಸ್ಥಿತಿ-ಗತಿ

1174 (1515) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಕೊಡಗು ಜಿಲ್ಲೆ, ಮಡಿಕೇರಿಯಲ್ಲಿರುವ ಕಾರಾಗೃಹವು ಅಧಿಕ ಅವ್ಯವಸ್ಥೆಗಳಿಂದ ಕೂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

2) ಸದರಿ ಕಾರಾಗೃಹವು ಖೈದಿಗಳಿಗೆ ವಾಸಿಸಲು ಯೋಗ್ಯವಾಗಿಲ್ಲವೆಂದು ಸರ್ಕಾರಕ್ಕೆ ತಿಳಿಸಿರುವುದು ನಿಜವೇ?

3) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

4) ಈ ಜೈಲಿನ ಸುಧಾರಣೆಗೆ ಹಮ್ಮಿಕೊಂಡಿರುವ ಯೋಜನೆಗಳಾವುವು?

5) ಕಾರಾಗೃಹವು ಖೈದಿಗಳನ್ನು ಸಂದರ್ಶಿಸಲು ಬಂದಾಗ ಸಂಬಂಧಿಗಳನ್ನು ಜೈಲಿನ ಸಿಬ್ಬಂದಿ ಲಂಚ ಕೇಳುತ್ತಾರೆಂಬ ಸಂಗತಿ ನಿಜವೇ? ಈ ಬಗ್ಗೆ ಸ್ಥಳೀಯ ಪತ್ರಿಕೆಯಲ್ಲಿ ಸುದ್ದಿ ಪ್ರಸಾರವಾಗಿದ್ದು ನಿಜವೇ? ಇದರ ಬಗ್ಗೆ ಸರ್ಕಾರದ ಕ್ರಮವೇನು ? ತಪ್ಪಿತಸ್ಥರ ಮೇಲೆ ಸರ್ಕಾರ ಯಾವ ಕ್ರಮ ಜರುಗಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

1) ಇಲ್ಲ

2) ಇಲ್ಲ

3) ಉದ್ಭವಿಸುವುದಿಲ್ಲ.

4) ಜೈಲಿನ ಸುಧಾರಣೆಗಾಗಿ ಜೈಲಿನ ಆಧುನೀಕರಣ ಯೋಜನೆಯ ಅಡಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜೈಲಿನ ಆಧುನೀಕರಣ ಯೋಜನೆಯಡಿ ಜಿಲ್ಲಾ ಕಾರಾಗೃಹ ಮಡಿಕೇರಿಗೆ 1) ಮೆಟಲ್ ಡಿಟೆಕ್ಟರ್ 2) ಜನರೇಟರ್ 3) ಸೋಡಿಯಂ ವೇಪರ್ ಲ್ಯಾಂಪ್ 4) ಮೋಟಾರ್ ಸೈಕಲ್ 5) ಸೀಲಿಂಗ್ ಉದ್ದೇಶಿತ ವ್ಯವಸ್ಥೆ 6) ದೂರದರ್ಶನ 7) ಸಾರ್ವಜನಿಕ ಉದ್ದೇಶಿತ ವ್ಯವಸ್ಥೆ 8) ಸಂಗೀತ ವಾದ್ಯೋಪಕರಣಗಳು 9) ಅಂಬ್ಯುಲೆನ್ಸ್ 10) ರೆಫ್ರಿಜರೇಟರ್ 11) ವೀಲ್ ಚೇರಗಳನ್ನು ನೀಡಲಾಗಿದೆ.

5) ಕೆಲವು ಸ್ಥಳೀಯ ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟವಾಗಿದ್ದು, ಇದರ ಬಗ್ಗೆ ಕರ್ನಾಟಕದ ಕಾರಾಗೃಹಗಳ ಉಪ ಮಹಾ ನಿರೀಕ್ಷಕರವರಿಂದ ವಿಚಾರಣೆ ನಡೆಸಲಾಗುವುದು.